SRI S.R. BOMMIA (Revenue Minister).—

(a) No

(b) Does not arise

(c) No.

೨. ವರದಿಗಳನ್ನೂ ಒಪ್ಪಿಸಂವುದು

ಶ್ರೀ ಪಿ. ಎಂ. ಚಿಕ್ಕಬೋರಯ್ಯ —ಅಧ್ಯಕ್ಷರೇ, ಅಧೀನ ಶಾಸನ ರಚನಾ ಸಮಿತಿಯ ಆರನೆಯ ವರದಿಯನ್ನು ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು.—ವರದಿಯನ್ನು ಒಪ್ಪಿಸಲಾಯಿತು.

ಶ್ರೀ ಬಿ. ಎಂ ತಿಪ್ಪೇಸ್ವಾಮಿ.—ಅಧ್ಯಕ್ಷರೇ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಮಿತಿಯ ೮ನೇ ವಿಧಾನಸಭೆಯ ೫ನೆಯ ವರದಿಯನ್ನು ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು.—ವರದಿಯನ್ನು ಒಪ್ಪಿಸಲಾಯಿತು.

ಗಮನ ಸೆಳೆಯುವ ಸೂಚನೆಗಳು

ಅಧ್ಯಕ್ಷರು.—ಈಗ ಗಮನ ಸೆಳೆಯುವ ಸೂಚನೆಗಳ ಪ್ರಸ್ತಾಪ. ಶ್ರೀ ಕೆ.ಎಚ್. ಶ್ರೀನಿವಾಸ್ ಅವರು ಗಮನ ಸೆಳೆಯಲಿ.

ಶ್ರೀ ಕೆ. ಎಚ್. ಶ್ರೀನಿವಾಸ್.—ಅಧ್ಯಕ್ಷರೇ, ನಾನು...

ಶ್ರೀ ಯು. ಭೂಪತಿ.—ಅಧ್ಯಕ್ಷರೇ, ನಾನು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆ. ನಾನು ಲಾ ಅಂಡ್ ಆರ್ಡರ್ ಬಗ್ಗೆ ಕೇಳಿದ್ದೇನೆ. ಈ ಬಗ್ಗೆ...

MR. SPEAKER.—I have already given my ruling.

ನಿಲುವಳಿ ಸೂಚನೆಗೆ (ಅನುಮತಿ ಕೋರಿಕೆ)

ರಾಜ್ಯದ ಹಣಕಾಸಿನ ಪರಿಸ್ಥಿತಿಯ ಬಗ್ಗೆ

ಶ್ರೀ ಎಸ್. ಬಂಗಾರಪ್ಪ,—ಅಧ್ಯಕ್ಷರು, ರಾಜ್ಯದ ಹಣಕಾಸಿನ ಪರಿಸ್ಥಿತಿ ಹದಗೆಟ್ಟಿದೆ. ರಾಜ್ಯದಲ್ಲಿ ಎಕಾನಮಿ ಆರ್ಡರ್‌ನಿಂದಾಗಿ ಹಣಕಾಸಿನ ಪರಿಸ್ಥಿತಿ ಹದಗಟ್ಟಿದೆ.

ಅಧ್ಯಕ್ಷರು.—ತಾವು ನಾಲ್ಕು ನಿಲುವಳಿ ಸೂಚನೆಗಳನ್ನು ಕಳುಹಿಸಿದ್ದೀರಿ. ನಾನು ಅವುಗಳಿಗೆ ಕನ್‌ಸೆಂಟ್ ಕೊಟ್ಟಿಲ್ಲ.

ಜಿಲ್ಲಾವಾರು ಅಂಗನವಾಡಿಯ ಬಗ್ಗೆ

೧೩೯(ಬಿ) ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಒಟ್ಟು ಅಂಗಡಿವಾಡಿಗಳ ಸಂಖ್ಯೆ ಎಷ್ಟು ? (ಜಿಲ್ಲಾವಾರು ವಿವರಗಳನ್ನು ಒದಗಿಸುವುದು)

(ಆ) ಅಂಗನವಾಡಿ ಶಿಕ್ಷಕಿಯರ ಸಂಬಳದ ಸ್ವರೂಪ ;

(ಇ) ಅವರುಗಳ ಸಂಬಳವನ್ನು ಹೆಚ್ಚಿಸುವ ಪ್ರಸ್ತಾವನೆಯುಂ ಸರ್ಕಾರದಲ್ಲಿದೆಯೇ ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

(ಅ) ಒಟ್ಟು ೯೪ ಸಮಗ್ರ ಬಾಲ ವಿಕಾಸ ಯೋಜನೆಯಲ್ಲಿ ೧೪೪೩೮ ಅಂಗನವಾಡಿಗಳನ್ನು ಮಂಜೂರು ಮಾಡಿದೆ. (ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ತೋರಿಸಲಾಗಿದೆ).